**ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿಯಮಿತ,ಬೆಂಗಳೂರು ವತಿಯಿಂದ 2021-22 ನೇ ಸಾಲಿನ ಐದು ದಿನಗಳ ರೈತರಿಗೆ ಅಲ್ಪಾವಧಿ ವೈಜ್ಞಾನಿಕ ಕೋಳಿ ಸಾಕಾಣಿಕಾ ಕಾರ್ಯಕ್ರಮ:-**

ರಾಜ್ಯದಲ್ಲಿ ರೈತರು ಹೆಚ್ಚಾಗಿ ಮಳೆಯಾಧಾರಿತ ಕೃಷಿಯನ್ನು ಅವಲಂಭಿಸಿದ್ದು ಅನಿಯಮಿತ ಮಾರುತಗಳಿಂದಾಗಿ ಕೃಷಿ ಚಟುವಟಿಕೆಗಳು ಕೆಲವೊಮ್ಮೆ ರೈತರಿಗೆ ನಷ್ಟವನ್ನುಂಟು ಮಾಡುತ್ತವೆ. ರಾಜ್ಯದಲ್ಲಿ ಜನಸಂಖ್ಯೆಯೂ ಹೆಚ್ಚುತ್ತಿರುವುದರಿಂದ, ಹೆಚ್ಚುತ್ತಿರುವ ಜನಸಂಖ್ಯೆಗನುಗುಣವಾಗಿ ಉದ್ಯೋಗಗಳ ಸೃಷ್ಟಿ ಸಾಧ್ಯವಾಗುತ್ತಿಲ್ಲ, ಇಂತಹ ಸಂಧರ್ಭಗಳಲ್ಲಿ ಕಡಿಮೆ ನೀರಿನ ಅವಶ್ಯಕತೆಯಿರುವ ಕೋಳಿ ಸಾಕಾಣಿಕೆಯ ನಿರುದ್ಯೋಗಿ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಅಶಾಕಿರಣವಾಗಿದೆ. ಈ ಹಿನ್ನಲೆಯಲ್ಲಿ ಮಹಾಮಂಡಳದ ಅಧೀನದ ಪ್ರಾದೇಶಿಕ ಕೇಂದ್ರಗಳಾದ ಗುಲ್ಬರ್ಗಾ, ಬೆಳಗಾವಿ, ಧಾರವಾಡ ಮತ್ತು ಮೈಸೂರು ಹಾಗೂ ಬೆಂಗಳೂರು ಕೇಂದ್ರಗಳ ವ್ಯಾಪ್ತಿಯ ಸುಮಾರು 1000 ನಿರುದ್ಯೋಗಿ ಯುವಕ/ಯುವತಿಯರಿಗೆ ವೈಜ್ಞಾನಿಕ ಕೋಳಿ ಸಾಕಾಣಿಕೆಯಲ್ಲಿ ತರಬೇತಿ ನೀಡಲು ಯೋಜಿಸಲಾಗಿದೆ.

ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದ ಪ್ರಾದೇಶಿಕ ಕೇಂದ್ರಗಳ ವತಿಯಿಂದ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆಯ ಸಹಯೋಗದೊಂದಿಗೆ ರೈತರಿಗೆ ಅಲ್ಪಾವಧಿ ವೈಜ್ಞಾನಿಕ ಕೋಳಿ ಸಾಕಾಣಿಕಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಈ ಕಾರ್ಯಕ್ರಮದಡಿ ರೈತರಿಗೆ ಕೋಳಿ ಸಾಕಾಣಿಕಾ ತರಬೇತಿ ಕಾರ್ಯಕ್ರಮವನ್ನು ಮಹಾಮಂಡಳದ ತರಬೇತಿ ಕೇಂದ್ರಗಳು / ಜಿಲ್ಲಾ ಕೇಂದ್ರಗಳಲ್ಲಿ ನೀಡಲಾಗುವುದು.

ತರಬೇತಿ ಕಾರ್ಯಕ್ರಮದ ಅವಧಿಯು 5 ದಿನಗಳದ್ದಾಗಿದ್ದು, ಈ ಅವಧಿಯಲ್ಲಿ ತರಬೇತಿ ಅಭ್ಯರ್ಥಿಗಳಿಗೆ ದಿನವೊಂದಕ್ಕೆ ರೂ.200/- ರಂತೆ ತರಬೇತಿ ಭತ್ಯೆ ನೀಡಲಾಗುವುದು. ಇದಲ್ಲದೇ ತರಬೇತಿ ಅಭ್ಯರ್ಥಿಗಳಿಗೆ ಲೇಖನಿ ಸಾಮಗ್ರಿ ಇತ್ಯಾದಿ ವೆಚ್ಚಗಳಿಗೆ ಹಾಗೂ ಅಭ್ಯರ್ಥಿಗಳ ಶೈಕ್ಷಣಿಕ ಪ್ರವಾಸಕ್ಕಾಗಿ ಸಮೀಪದ ಫಾರಂಗಳಿಗೆ ಭೇಟಿಗಳಿಗೆ ರೂ.800/-ಗಳು, ಅನುದಾನ ನಿಗಧಿಪಡಿಸಲಾಗಿದೆ. ಇದಲ್ಲದೇ ಅಭ್ಯರ್ಥಿಗಳಿಗೆ ತರಬೇತಿ ಕಿಟ್ ನೀಡಲಾಗುತ್ತದೆ. ಇದರಲ್ಲಿ ಕೋಳಿ ಸಾಕಾಣಿಕೆಯ ಕುರಿತಾದ ತರಬೇತಿ ಕೈಪಿಡಿಯೂ ಸೇರಿರುತ್ತದೆ.

ತರಬೇತಿ ಕಾರ್ಯಕ್ರಮವನ್ನು ಮುದ್ರಣ ಮಾಧ್ಯಮದಲ್ಲಿ ಜಾಹೀರಾತು ನೀಡುವ ಮೂಲಕ ಪ್ರತಿ ಮಾಹೆ ಆಯೋಜಿಸಲಾಗುವುದು, ಮೊದಲು ಬಂದು ನೋಂದಾಯಿಸುವವರಿಗೆ ಮೊದಲು ಆದ್ಯತೆಯ ಮೇಲೆ ತರಬೇತಿ ನೀಡಲಾಗುವುದು, ಸರ್ಕಾರದ ಚಾಲ್ತಿಯಲ್ಲಿರುವ ನಿಯಮಗಳಿಗನುಗುಣವಾಗಿ ತರಬೇತಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

2021-22 ನೇ ಸಾಲಿನಲ್ಲಿ ಸುಮಾರು 1000 ಅಭ್ಯರ್ಥಿಗಳಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ.

| **ತರಬೇತಿ** | **ತರಬೇತಿಯ ಸಂಕ್ಷಿಪ್ತ ವಿವರ** |
|---|---|
| ಕೋಳಿ ಸಾಕಾಣಿಕೆಯಲ್ಲಿ ಅಲ್ಪಾವಧಿ ತರಬೇತಿ | ತರಬೇತಿ ಅವಧಿ – 5 ದಿನಗಳು |
| | ತರಬೇತಿ ಭತ್ಯೆ ಪ್ರತಿ ದಿನಕ್ಕೆ – ರೂ.200/- |
| | ತರಬೇತಿ ಪಡೆಯುವವರಿಗೆ ಅಲ್ಪೋಪಹಾರ ವೆಚ್ಚ, ಶೈಕ್ಷಣಿಕ ಪ್ರವಾಸದಡಿ ಸಮೀಪದ ಫಾರಂಗಳಿಗೆ ಭೇಟಿ, ಲೇಖನ ಸಾಮಗ್ರಿ, ತರಬೇತಿ ಕಿಟ್ ಹಾಗೂ ತರಬೇತಿ ಕೈಪಿಡಿ ನೀಡಲಾಗುವುದು. |

**ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿಯಮಿತ, ಬೆಂಗಳೂರು ವತಿಯಿಂದ 2021-22 ನೇ ಸಾಲಿನ ಐದು ದಿನಗಳ ಅಲ್ಪಾವಧಿ ಕೋಳಿ ಸಾಕಾಣಿಕೆ ತರಬೇತಿ ಕಾರ್ಯಕ್ರಮದ ಮಾದರಿ ವೇಳಾ ಪಟ್ಟಿ**

| ಕ್ರಸಂ | ದಿನ | ವೇಳೆ | ವಿಷಯ |
|---|---|---|---|
| 1 | ಮೊದಲ ದಿನ | 10.30 - 12.00 | ಅಭ್ಯರ್ಥಿಗಳ ಹೆಸರು ನೊಂದಣಿ<br>Registration of Trainees & Inaugration |
| | | 12.00 - 1.30 | ಕೋಳಿ ಸಾಕಾಣಿಕೆ ಉದ್ದೇಶ ಮತ್ತು ಮಹತ್ವ<br>Purpose and importance of Poultry Farming |
| | | 1.30 - 2.30 | ಮಧ್ಯಂತರ / Lunch Break |
| | | 2.30 - 4.30 | ಕೋಳಿ ಸಾಕಾಣಿಕೆಯ ವಿವಿಧ ಪದ್ಧತಿಗಳು ಮತ್ತು ಕೋಳಿ ಮನೆಗಳ ವಿನ್ಯಾಸ, ಕೋಳಿ ಜಾತಿಗಳ ಮಹತ್ವ.<br>Practises of Poultry Farming, Different types of Housing/ Poultry Breeds |
| 2 | ಎರಡನೇ ದಿನ | 10.30 - 1.30 | ಮೊಟ್ಟೆ ಹಾಗೂ ಮಾಂಸದ ಕೋಳಿಗಳ ಸಾಕಾಣಿಕೆ ಮತ್ತು ಸಮತೋಲನ ಆಹಾರ ಹಾಗೂ ಹ್ಯಾಚರಿ ಮತ್ತು ಬ್ರೂಡಿಂಗ್ ಘಟಕಗಳ ನಿರ್ವಹಣೆ, ನೀರಿನ ವಿಶ್ಲೇಷಣೆ ಮತ್ತು ದಾಖಲಾತಿಗಳ ನಿರ್ವಹಣೆ, ಮಾದರಿ ಯೋಜನಾ ವರದಿ ಕುರಿತು<br>Broiler and Layer Poultry Farming, Poultry balanced nutrition, Maintainance of Hatchery and Brooding Units, Water Analysis and and Sample project report. |
| | | 1.30 – 2.30 | ಮಧ್ಯಂತರ/ Lunch Break |
| | | 2.30 – 4.30 | ಕೋಳಿಗಳಿಗೆ ಬರುವ ರೋಗಗಳು ಮತ್ತು ಲಸಿಕೆಗಳ ವೇಳಾಪಟ್ಟಿ ಹಾಗೂ ದಾಖಲೆಗಳನ್ನು ನಿರ್ವಹಿಸುವುದು.<br>Layer birds management backyard poultry. |
| 3 | ಮೂರನೇ ದಿನ | 10.30 – 1.30 | ಕೋಳಿಗಳಿಗೆ ಸಮತೋಲನ ಆಹಾರ ಹಾಗೂ ಕೋಳಿ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆಗಳ ಕುರಿತು ಅಥವಾ ವಿಡಿಯೋ ಪ್ರದರ್ಶನ / Poultry Nutrition & Latest development in Poultry Industry or Video Presentation |
| | | 1.30-2.30 | ಮಧ್ಯಂತರ Lunch Break |
| | | 2.30 – 4.30 | ತತ್ತಿಕೋಳಿಗಳ ಪಾಲನೆ ಪೋಷಣೆ ಮತ್ತು ನಾಟಿಕೋಳಿಗಳ ಸಾಕಾಣಿಕೆ<br>Poultry Diseases & Vaccination schedule . |
| 4 | ನಾಲ್ಕನೇ ದಿನ | 10.30 - 4.30 | ಅಧ್ಯಯನ ಪ್ರವಾಸ / Study Tour |
| 5 | ಐದನೇ ದಿನ | 10.30 - 12.00 | ಕುಕ್ಕುಟ ಮಹಾಮಂಡಳದ ಯೋಜನೆಗಳ ವಿವರಗಳನ್ನು ತಿಳಿಸುವುದು, Information about Programme & Schemes in KCPF.<br>ಸಂಯೋಜಿತ ಕೋಳಿ ಸಾಕಾಣಿಕೆಯ ಬಗ್ಗೆ ಮಾಹಿತಿ.<br>Information about Integrated Poultry farming. |
| | | 12.00 1.30 | ಪ್ರಾಥಮಿಕ ಕುಕ್ಕುಟ ಸಾಕಾಣಿಕೆ ಸಂಘಗಳ ಸ್ಥಾಪನೆ ಮಾಡುವ ಕುರಿತು ಮಾಹಿತಿ<br>Information about Formation of Primary Co-operative Societies. |
| | | 1.30 - 2.30 | ಮಧ್ಯಂತರ / Lunch Break |
| | | 2.30 - 4.30 | ಕೋಳಿ ಸಾಕಾಣಿಕೆ ಕುರಿತು ಅಭ್ಯರ್ಥಿಗಳ ಮೌಲ್ಯಮಾಪನ ಅಭ್ಯರ್ಥಿಗಳಿಗೆ ನಗದು ವಿತರಣೆ, ಪ್ರಮಾಣ ಪತ್ರ ವಿತರಣೆ ಹಾಗೂ ಮುಕ್ತಾಯ ಸಮಾರಂಭ / Evaluation of Trainees about Farming, Stipend & Certificate distribution Completion of Training, Group Photo |

**ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ(ನಿ), ಬೆಂಗಳೂರು**

**ವತಿಯಿಂದ ಕೋಳಿ ಸಾಕಾಣಿಕೆಗಾಗಿ ರೈತರಿಗೆ ಅಲ್ಪಾವಧಿ ತರಬೇತಿ ಕಾರ್ಯಕ್ರಮಕ್ಕ**

**ಅರ್ಜಿನಮೂನೆ**

ಅರ್ಜಿದಾರರ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಲಗತ್ತಿಸುವುದು.

| | | |
|---|---|---|
| 01 | ಅರ್ಜಿದಾರರ ಹೆಸರು / ವಿಳಾಸ | |
| 02 | ಅರ್ಜಿದಾರರ ತಂದೆ/ಗಂಡನ/ಪೋಷಕರ ಹೆಸರು | |
| 03 | ಅರ್ಜಿದಾರರ ಹುಟ್ಟಿದ ದಿನಾಂಕ / ವಯಸ್ಸು / ಲಗತ್ತಿಸಿರುವ ಗುರುತಿನ ಚೀಟಿ/ ಆಧಾರ ಕಾರ್ಡ್ ಯಲ್ಲಿರುವಂತೆ | |
| 04 | ಅರ್ಜಿದಾರರ ಲಿಂಗ ( ಪುರುಷ / ಮಹಿಳೆ ) | |
| 05 | ಖಾಯಂ ವಿಳಾಸ | |
| 06 | ಜಿಲ್ಲೆ / ವಿಭಾಗ | |
| 07 | ದೂರವಾಣಿ ಸಂಖ್ಯೆ | |
| 08 | ಆಧಾರ್ ಸಂಖ್ಯೆ | |
| 09 | ಇ- ಮೇಲ್ ವಿಳಾಸ (ಲಭ್ಯವಿದ್ದಲ್ಲಿ) | |
| 10 | ಅರ್ಜಿದಾರರ ವಿದ್ಯಾರ್ಹತೆ<br>ಅರ್ಜಿದಾರರ ಉದ್ಯೋಗ | |
| 11 | ವರ್ಗ – ಸಾಮಾನ್ಯ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ | |
| 12 | ಅರ್ಜಿದಾರರು ಅಂಗವೈಕಲ್ಯರೇ (ಹೌದು / ಇಲ್ಲ) | |
| 13 | ಅರ್ಜಿದಾರರ ಕುಟುಂಬ ಪಡಿತರ ಚೀಟಿ ಸಂಖ್ಯೆ (ಬಿಪಿಎಲ್ / ಎಪಿಎಲ್) | |
| 14 | ಫ್ರೂಟ್ ಐಡಿ ಸಂಖ್ಯೆ: ( ಲಭ್ಯವಿದ್ದಲ್ಲಿ) | |

ಸ್ಥಳ :

ದಿನಾಂಕ: **ಅರ್ಜಿದಾರರ ಸಹಿ.**

**ಸೂಚನೆ:-**

1. ತರಬೇತಿಗೆ ಹಾಜರಾಗುವ ಅರ್ಜಿದಾರರು ಮೇಲೆ ನಮೂದಿಸಿರುವ ಜಾತಿ ಪ್ರಮಾಣ ಪತ್ರ, ಆಧಾರ ಕಾರ್ಡ್ / ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಖಾತ ಸಂಖ್ಯೆ ಹೊಂದಿರುವ ಪುಟದ ಜೆರಾಕ್ಸ್ ಪ್ರತಿಯನ್ನು ತರುವುದು.
2. ತರಬೇತಿ ಪಡೆಯಲು ಇಚ್ಛಿಸುವ ಅರ್ಜಿದಾರರು ಸಂಬಂಧಪಟ್ಟ ವಿಭಾಗದ ಪ್ರಾದೇಶಿಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸುವುದು.

**ತರಬೇತಿ ಪಡೆಯಲು ಇಚ್ಛಿಸಿರುವ ಅರ್ಜಿದಾರರು ಈ ಕೆಳಕಂಡ ಸಂಬಂಧಪಟ್ಟ ವಿಭಾಗದ ಪ್ರಾದೇಶಿಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸಲು ಕೋರಿದೆ.**

| ಕ್ರಸಂ | ವಿಭಾಗ | ಪ್ರಾದೇಶಿಕ ಕೇಂದ್ರ | ಜಿಲ್ಲೆಗಳು |
|---|---|---|---|
| 01 | ಬೆಂಗಳೂರು | ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, #52, ಕ್ವೀನ್ಸ್ ರಸ್ತೆ, ಪಶು ಆಸ್ಪತ್ರೆ ಆವರಣ, ಬೆಂಗಳೂರು-560 052,<br>ದೂರವಾಣಿ ಸಂಖ್ಯೆ:080-22282218 /<br>ಇ-ಮೇಲ್ ಐಡಿ mdkcpfbangalore@gmail.com | ಬೆಂಗಳೂರು ನಗರ<br>ಬೆಂಗಳೂರು ಗ್ರಾ<br>ರಾಮನಗರ<br>ಕೋಲಾರ<br>ಚಿಕ್ಕಬಳ್ಳಾಪುರ<br>ತುಮಕೂರು<br>ಶಿವಮೊಗ್ಗ<br>ಚಿತ್ರದುರ್ಗ<br>ದಾವಣಗೆರೆ |
| 02 | ಮೈಸೂರು | ಸಹಾಯಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಮಾನಂದವಾಡಿ ರಸ್ತೆ, ಚಾಮುಂಡಿಪುರಂ, ಮೈಸೂರು<br>ದೂರವಾಣಿ ಸಂಖ್ಯೆ: 0821-2422775,<br>ಇ-ಮೇಲ್ ಐಡಿ adkcpfmysore2@gmail.com | ಮೈಸೂರು<br>ಚಿಕ್ಕಮಗಳೂರು<br>ಮಂಡ್ಯ<br>ಹಾಸನ<br>ಕೊಡಗು<br>ಉಡುಪಿ<br>ದಕ್ಷಿಣ ಕನ್ನಡ<br>ಚಾಮರಾಜನಗರ |
| 03 | ಧಾರವಾಡ | ಸಹಾಯಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಪ್ರಾದೇಶಿಕ ಕೇಂದ್ರ, ಸಂಜೀವಿನಿ ಪಾರ್ಕ್ ಹತ್ತಿರ, ರಾಯಾಪುರ, ಧಾರವಾಡ-580 009.<br>ದೂರವಾಣಿ ಸಂಖ್ಯೆ: 0836- 2322252<br>ಇ-ಮೇಲ್ ಐಡಿ adkcpfdharawada@gmail.com | ಉತ್ತರಕನ್ನಡ<br>ಧಾರವಾಡ<br>ಗದಗ<br>ಹಾವೇರಿ |
| 04 | ಬೆಳಗಾವಿ | ಸಹಾಯಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಪ್ರಾದೇಶಿಕ ಕೇಂದ್ರ, ಮಾಳಮಾರುತಿ ಬಡಾವಣೆ, ಹಾಲಿನ ಡೈರಿ ಹತ್ತಿರ, ಕಣಬುರ್ಗಿ ರಸ್ತೆ, ಬೆಳಗಾವಿ<br>ದೂರವಾಣಿ ಸಂಖ್ಯೆ: 0831-2454568.<br>ಇ-ಮೇಲ್ ಐಡಿ adkcpfbelgaum@gmail.com | ಬೆಳಗಾವಿ<br>ಬಾಗಲಕೋಟೆ<br>ವಿಜಯಪುರ |
| 05 | ಕಲಬುರಗಿ | ಸಹಾಯಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಪ್ರಾದೇಶಿಕ ಕೇಂದ್ರ, ಪಶು ಆಸ್ಪತ್ರೆ ಕಾಂಪೌಂಡ್, ಸೇಡಂ ರಸ್ತ, ಕಲಬುರಗಿ-585 105<br>ದೂರವಾಣಿ ಸಂಖ್ಯೆ: 08472 241256<br>ಇ-ಮೇಲ್ ಐಡಿ adkfgulbarga@gmail.com | ಕಲಬುರಗಿ<br>ಬೀದರ್<br>ರಾಯಚೂರು<br>ಯಾದಗಿರಿ<br>ಕೊಪ್ಪಳ<br>ಬಳ್ಳಾರಿ |